ಬೇರೆ ಬೇರೆ ಸಾಧ್ಯತೆಗಳ, ವಿಕಲ್ಪಗಳ ಬಗ್ಗೆ ಯೋಚಿಸಬಲ್ಲವನಾಗಿದ್ದ. ಥಿಂಕಿಂಗ್ ಕಾಪ್ ಅನ್ನಬಹುದೇನೊ.

ಮಾಯಣ್ಣ ಕೆಳಗಿಳಿದು ತೆರೆದ ಬಾಗಿಲ ಮೇಲೆ ಮೆಲ್ಲಗೆ ತಟ್ಟಿ ಕರೆಯಲು, ಮನೆಯೊಡತಿ ಬಂದು ಒಳಗೆ ಕರೆದು ನಡುಮನೆಯಲ್ಲಿ ಕುಳ್ಳಿರಿಸಿದರು. ಅಲ್ಲೇ ಕುಳಿತಿದ್ದ ಆಕೆಯ ಯಜಮಾನರು ತಾವೇ ಪರಿಚಯ ಮಾಡಿಕೊಂಡರು.

‘ನನ್ನ ಹೆಸರು ವೆಂಕಟರಾಮಯ್ಯ ಅಂತ... ರಿಟೈರ್ಡ್ ಬ್ಯಾಂಕ್ ಮ್ಯಾನೇಜರ್. ಆಕೆ ನನ್ನ ಹೆಂಡತಿ ಸತ್ಯವತಿ. ನಮಗೆ ಒಬ್ಬನೇ ಮಗ. ಮದುವೆ ಆಗಿ ಅಮೆರಿಕದಲ್ಲಿ ಸೆಟ್ಲ್ ಆಗಿದ್ದಾನೆ. ಇದು ನನ್ನ ಸ್ವಂತ ಮನೆ.’

ನಗರವಾಸಿ ಹಿರಿಯ ನಾಗರಿಕರ ಕುಟುಂಬಗಳ ಮಾಮೂಲಿ ಕಥೆ. ಎಲೆಮರೆಯ ಕಾಯಿಯಂತಿದ್ದ ತಮ್ಮ ಮನೆ ಇದ್ದಕ್ಕಿದ್ದಂತೆ ಎಲ್ಲರ ಕುತೂಹಲಕ್ಕೆ ಗ್ರಾಸವಾಗಿ ಮನೆ ಮಾಲೀಕರಾದ ವೃದ್ಧ ದಂಪತಿಗೆ ಸಾಕಷ್ಟು ಕಸಿವಿಸಿ, ಮುಜುಗರ ಮಾಡಿತ್ತು.

‘ಕಾಫಿ ತಗೊಳ್ಳಿ...’ ಎನ್ನುತ್ತಾ ಸತ್ಯವತಿ ಕಾಫಿ ಲೋಟ ಟೀಪಾಯಿ ಮೇಲಿಟ್ಟರು. 70–75ರ ನಡುವಿನ ಹಿರಿಯ ದಂಪತಿ, ಆದರೂ ಸಾಕಷ್ಟು ಆರೋಗ್ಯವಾಗೇ ಇದ್ದಾರೆ ಅನ್ನಬಹುದೇನೊ. ‘ನಿಮಗೆ ಈಗ ಗೊತ್ತಿರೊ ಹಾಗೆ ಒಂದೂವರೆ ವರ್ಷದಿಂದ ಅಮ್ಮು ನಮ್ಮ ಮೇಲಿನ ಮನೇಲಿ ಟೆನೆಂಟ್ ಆಗಿದ್ರು.’

ಮಾಯಣ್ಣ, ಅವರನ್ನು ತಡೆಯದೆ ಹೇಳುವುದೆಲ್ಲ ಹೇಳಲಿ ಎಂದು ಕಾಫಿ ಕುಡಿಯುತ್ತಾ ಸುಮ್ಮನೆ ಕೇಳುತ್ತಾ ಕುಳಿತ.

‘ಮಗನ್ನ ಓದಿಸಿ ಅಮೆರಿಕಕ್ಕೆ ಬೀಳ್ಕೊಟ್ಟ ನಂತರ ಮನೆ ಖಾಲಿ ಖಾಲಿ ಅಂತ ಅನ್ನಿಸೋಕೆ ಶುರುವಾಯಿತು.’

‘ನಿಮ್ಮ ಈ ಮನೇಲಿ ಬೇರೆ ಯಾರೂ ಇಲ್ವ.’

‘ಇಲ್ಲ. ಇಲ್ಲಿ ನಾವಿಬ್ರೇ ವಾಸ. ಅಡುಗೆ ಕೆಲಸದ ಸಹಾಯಕ್ಕೆ ಮತ್ತು ಬೇರೆ ಎಲ್ಲಾ ಕೆಲಸಕ್ಕೆ ಕಮಲ ಇದ್ದಾಳೆ. ನಮ್ಮ ಮನೆಯ ಹಿಂಭಾಗದಲ್ಲಿ ಒಂದು ಶೆಡ್ ತರ ಸೆಪರೇಟ್ ಕೋಣೆ ಇದೆ. ಕಮಲಾಗೆ ಹೇಳೋಣ ಅಂತ ತಿಳಕೊಂಡ್ವಿ, ಇಲ್ಲೇ ಇದ್ದು ಬಿಡಮ್ಮ ಅಂತ. ಆದರೆ ಅವಳ ಜೊತೆ ಅವಳ ಗಂಡ ಜಯರಾಮನೂ ಬರ್ತಾನೆ. ಅವನು ಪ್ಲಂಬರ್. ನಮ್ಮ ಬಿಲ್ಡಿಂಗಲ್ಲಿ ಎಲ್ಲಾ ರಿಪೇರಿ ಕೆಲಸ ಅವನೇ ಮಾಡೋದು. ನಮ್ಮನೆಗೆ ತಿಂಗಳಿಗೊಂದ್ಸಾರಿನೋ ಎರಡ್ಸಾರಿನೋ ಬರ್ತಾ ಇರ್ತಾನೆ – ಕೆಲಸ ಇರಲಿ ಇಲ್ಲದೇಯಿರಲಿ. ಕಮಲ ಹೇಳ್ತಾಯಿರ್ತಾಳೆ, ಅವನ ಕೈ–ಬಾಯಿ ಶುದ್ಧಿ ಇಲ್ಲ, ಎಲ್ಲಾ ತರ ಚಟಗಳು ಇವೆ, ಮನೆಗೆ ರಾತ್ರಿ ಯಾವಾಗ್ಲೋ ಬರ್ತಾನೆ, ಒಂದೊಂದ್ಸಾರಿ, ಹೋದವ್ನು ಮೂರ್ನಾಲ್ಕು ದಿನ ಬರೋದೇ ಇಲ್ಲ ಅಂತ. ಹೋದ ತಿಂಗಳು ಅಮ್ಮು ಮನೇಲಿ ಟೇಬಲ್ ಮೇಲೆ ಇಟ್ಟಿದ್ದ ಎಂಟು ಸಾವಿರ ಕ್ಯಾಶ್ ಎಗರ್ಸ್ ಬಿಟ್ಟಿದ್ದಾ.’

‘ಹೌದೇನೂ.’

‘ಏನೋ. ಅಮ್ಮು ಇದ್ದಾಗ ಆಗಾಗ ಬರ್ತಿದ್ಲು. ಅದು ಇದೂ ಮಾತಾಡ್ಕೊಂಡು ಟೈಮ್ ಪಾಸ್ ಆಗ್ತಾ ಇತ್ತು.’

ಸಾಮಾನ್ಯವಾಗಿ ಈ ಮುದುಕರಿಗೆ ಮಾತಿಗೆ ಯಾರು ಸಿಗೋದಿಲ್ಲ. ಕೇಳುಸ್ಕೊಳ್ಳೊ ಎರಡು ಕಿವಿ ಸಿಕ್ಕಿದ್ರಂತೂ, ತೆರೆದ ಬಾಯಿಗೆ ಬ್ರೇಕೇ ಇರಲ್ಲ. ಹಾಗೆ ಮುಂದುವರಿದಿತ್ತು ಯಜಮಾನರ ವಾಣಿ.

‘ಈಗ್ಲಾದ್ರು ಅಲ್ಲೊಂದು ಇಲ್ಲೊಂದು ಮನೆಗಳು ಇವೆ. ಮೊದಲು ನಾವು ಬಂದಾಗ ನಮ್ಮದೊಂದೇ ಮನೆ. ಮೊದಲೇ ಈ ಲೇಔಟ್‌ನಲ್ಲಿ ಸಾಮಾನ್ಯವಾಗಿ ಯಾರೂ ಬಾಡಿಗೆಗೆ ಬರೋದಕ್ಕೆ ಹಿಂಜರಿತಿದ್ದರು. ಈಗ ಈ ಕೊಲೆಯ ನಂತರ ಇದಕ್ಕೆ ದೆವ್ವದ ಮನೆ ಅಂತ ಹಣೆಪಟ್ಟಿ ಹಚ್ಚಿದ್ರೆ ಅಷ್ಟೇ.’

ಮೇಲೆ ಹೆಣ ಬಿದ್ದಿದೆ, ಇಲ್ಲಿ ಯಜಮಾನರಿಗೆ ಇನ್ನೇನೊ ಚಿಂತೆ. ಬಿಟ್ಟರೆ ದಿನ ಎಲ್ಲಾ ಮಾತಾಡ್ತಾರೆ, ಬೇಗ ವಿಷಯಕ್ಕೆ ಬರಬೇಕು ಅನ್ನಿಸಿ–

‘ಬೆಳಿಗ್ಗೆಯಿಂದ ಈ ಮನೆಗೆ ಯಾರೆಲ್ಲ ಬಂದಿದ್ದರು?’

‘ಜಯಂತ್ ಬಂದಿದ್ದ. ಇನ್ಯಾರ್ನು ನೋಡ್ದಂಗಾಗಲಿಲ್ಲ. ಇರಿ, ಕಮಲ, ಅಮ್ಮು ಮೇಲೂ ಕೆಲಸ ಮಾಡ್ತಾಳೆ, ಅಲ್ಲದೆ ಒಳಗೆ ಹೊರಗೆ ಓಡಾಡ್ತಾನೆ ಇರ್ತಾಳೆ. ಅವಳು ಸರಿಯಾಗಿ ಹೇಳ್ತಾಳೆ. ಸತ್ಯಾ.. ಆ ಕಮಲನ ಕರಿ...’

‘ಜಯಂತ್ ಯಾರು ಸಾರ್...’

‘ಜಯಂತ್, ಅಮ್ಮು ಮದುವೆ ಆಗ್ಬೇಕು ಅಂತಿದ್ದ ಹುಡುಗ. ಆಗಾಗ ಬರ್ತಾಯಿರ್ತಾನೆ.’

‘ರೀ ಕಮಲ ಇಲ್ಲ. ಎಲ್ಲಾ ಕಡೆ ನೋಡ್ದೆ. ಕಮಲ ಎಲ್ಲೂ ಕಾಣುಸ್ತಾಯಿಲ್ಲ.’

ಮನೆಯಲ್ಲೇ ಇದ್ದ ಕಮಲ ಅಷ್ಟು ಬೇಗ ಮಾಯವಾದುದಾದರು ಹೇಗೆ, ಮಾಯಣ್ಣನಿಗೆ ತಲೆಬಿಸಿಯಾಗಿತ್ತು.

3

ಅಲ್ಲಿಯ ತನಕ ಮನೆಯಲ್ಲೇ ಇದ್ದ ಕೆಲಸದಾಕೆ ಕಮಲ, ಇದ್ದಕ್ಕಿದ್ದಂತೆ ಎಲ್ಲೂ ಕಾಣ್ತಾಯಿಲ್ಲಾ ಎಂದು ಮನೆಯೊಡತಿ ಸತ್ಯವತಿ ಹೇಳಲು, ಮಾಯಣ್ಣನಿಗೆ ತಲೆಕೆಟ್ಟಂತಾಗಿತ್ತು.

ಕೊಲೆಯಾದ ಅಮ್ಮುನ ನೋಡಿದ ಮೊದಲ ವ್ಯಕ್ತಿ, ಕೊಲೆಯ ಸುದ್ದಿ ಕೊಟ್ಟ ಮೊದಲ ವ್ಯಕ್ತಿ ಕಮಲ. ಫಸ್ಟ್ ವಿಟ್ನೆಸ್. ಅತ್ಯಂತ ಮುಖ್ಯ ಸಾಕ್ಷಿ. ಈ ಹಠಾತ್ ಬೆಳವಣಿಗೆಯಿಂದ ತನಿಖಾ ಪ್ರಕ್ರಿಯೆಗೆ ತೀವ್ರ ಹಿನ್ನಡೆಯಾಗುವ ಸಾಧ್ಯತೆ ಇತ್ತು.

‘ದಯವಿಟ್ಟು ಇನ್ನೊಂದು ಸಾರಿ ಸರಿಯಾಗಿ ನೋಡಿ ತಾಯಿ. ಅಲ್ಲೇ ಎಲ್ಲೋ ಒಳಗೋ ಹೊರಗೋ ಇರಬೇಕು.’

‘ನೋಡುದ್ನಲ್ಲ, ಎಲ್ಲೂ ಇಲ್ಲ...’

ಈಗ ನಿಜಕ್ಕೂ ಮಾಯಣ್ಣನಿಗೆ ಆತಂಕವಾಗಿತ್ತು.

‘ಬಂದೆ ಇರಿ’ ಎಂದು ಮಾಯಣ್ಣ ತಾನೇ ಒಳಗೆ ಒಂದೊಂದೇ ಕೋಣೆ ನೋಡುತ್ತಾ ಬರಲು, ಮಂಕು ದೀಪದ ಉಗ್ರಾಣ ಕೋಣೆಯ, ಅಲ್ಲೇ ಒಂದು ಮೂಲೆಯಲ್ಲಿ, ನೆಲದ ಮೇಲೆ ಕುಳಿತು, ತನ್ನ ಮಡಚಿದ ಕಾಲಿನ, ಎರಡೂ ಮಂಡಿಯ ಮಧ್ಯೆ ತಲೆ ಹಾಕಿ, ಬಾಯಿಗೆ ಸೆರಗಿನಂಚನ್ನು ಮುಚ್ಚಿಕೊಂಡು ಮುಸು ಮುಸು ಅಳುತ್ತಿದ್ದಳು ಕಮಲ. ನ್ಯಾಯಾಲಯಗಳು, ತೀರಾ ಹಣ್ಣಾದ ಹಿರಿಯ ನಾಗರಿಕರು ಕಟಕಟೆಯಲ್ಲಿ ನಿಂತು ಹೇಳುವ ಸಾಕ್ಷಿಗಳನ್ನು ಏಕೆ ಸಂದೇಹದಿಂದ ನೋಡುತ್ತವೆ ಎನ್ನುವುದು ಇದಕ್ಕೇ ಏನೋ. ಬಾಗಿಲಲ್ಲಿ ನಿಂತ ಮಾಯಣ್ಣನ ಕಡೆ ತಲೆ ಎತ್ತಿದ ಕಮಲಾಳ ನೀರಾಡುತ್ತಿದ್ದ ಕಣ್ಣುಗಳಲ್ಲಿ ಯಾವುದೇ ಕಪಟದ ಸಣ್ಣ ಸುಳಿವೂ ಇರಲಿಲ್ಲವೆನಿಸಿತ್ತು.

‘ಅಮ್ಮು ಅವರಿಗೆ ಹೀಗಾಗ್ಬಾರ್ದಿತ್ತು.’

ಕಮಲಗಳನ್ನು ಮಾತಿಗೆ ಉತ್ತೇಜಿಸುವಂತೆ, ಮಾತಿಗಿಳಿಯದೆ, ಉತ್ತರಕ್ಕೆ ಕಾದು, ಮೌನವಾಗಿ ನಿಂತ ಮಾಯಣ್ಣ. ಸ್ವಲ್ಪ ಹಿಂಜರಿಕೆಯಿಂದಲೇ ಮಾತನಾಡಲು ಆರಂಭಿಸಿದಳು ಕಮಲ.

‘ನನ್ನವ್ರೂ ಅಂತ ಯಾರು ಇಲ್ಲ ಸಾರ್. ಯಾರೋ ನೆಂಟ್ರು ಮನೇಲಿ ಚಾಕ್ರಿ ಮಾಡ್ಕೊಂಡು ಬೆಳೆದವ್ಳು ನಾನು, ಅವ್ರು ತೋರ್ಸದವ್ರನ್ನ ಲಗ್ನ ಮಾಡ್ಕೊಂಡೆ. ಮಡ್ಲುಗೊಂದು ಮಗು ಕೊಟ್ಟ ಅನ್ನೋದು ಬಿಟ್ರೆ, ಇನ್ಯಾವ್ ಲೆಕ್ಕಕ್ಕೂ ನನ್ಗಂಡ ಗಂಡನೇ ಅಲ್ಲಾ ಸಾರ್. ಏನೋ ನಂದೂ ಒಂದು ಬಾಳು, ಅಮ್ಮು ಅಕ್ಕನೇ ನನ್ಗೆಲ್ಲಾ ಆಗಿದ್ರೂ. ಕೆಲಸ್ದವ್ಳೇ ಆಗಿದ್ರೂ ನನ್ನ್ಯಾವತ್ತೂ ಆ ರೀತಿ ಕಂಡವ್ರಲ್ಲಾ. ನನ್ ಕಷ್ಟ ಸುಖ ಕೇಳೋಕೆ ಅವರೊಬ್ರಿದ್ರು. ಸ್ವಂತ ತಂಗಿ ಅನ್ನೊಂಗೆ, ನನ್ನತ್ರ ಎಲ್ಲಾ ಯೇಳ್ಕೊಳೋವ್ರು.’

ಅಲ್ಲಿಗೆ ತನಿಖೆಗೆ ಬೇಕಾದ ಎಷ್ಟೋ ವಿಷಯಗಳು ಕಮಲಳ ಬಳಿಯೇ ಸಿಗಬಹುದೇನೊ ಎಂದು ಅನಿಸಿತ್ತು ಮಾಯಣ್ಣನಿಗೆ.

‘ಆಯ್ತು ಕಮಲಮ್ಮ, ಅಮ್ಮು ನಿಮ್ಮ ಹತ್ರ ಎಲ್ಲಾ ಹೇಳ್ಕೊಳ್ತಾಯಿದ್ರು ಅಂದ್ರಲ್ಲಾ. ಅವರ ಕುಟುಂಬದವ್ರು, ಸ್ನೇಹಿತರು, ಪರಿಚಯಸ್ಥರು. ಅವರುಗಳ ಸಂಬಂಧಗಳು, ಜಗಳ, ವೈರತ್ವ... ಇನ್ನೂ ಏನೇನು ಗೊತ್ತಿದೆಯೋ ಅದನ್ನೆಲ್ಲಾ ಹೇಳಿ. ಮುಖ್ಯವಾಗಿ ಇವತ್ತು ಬೆಳಿಗ್ಗೆಯಿಂದ ಏನೇನು ನೋಡುದ್ರೋ, ಏನೇನು ಕಿವಿಗೆ ಬಿತ್ತೋ, ಏನೇನು ಮಾತಾಡುದ್ರೋ, ಒಂದೂ ಬಿಡದೆ ಮೊದಲಿಂದ ಹೇಳಬೇಕು. ನೀವೇಳಿದ್ದೆಲ್ಲಾ ನಮ್ಮ ಸ್ಟೇಷನ್ ರೈಟರ್, ರೆಕಾರ್ಡ್ ಮಾಡ್ಕೊಂತಾರೆ. ಅಮ್ಮೂ ನಿಮ್ಮಕ್ಕ ಇದ್ದಂಗಿದ್ರು ಅಂದ್ರಲ್ಲಾ. ಅವ್ರಿಗ್ನೆ ನ್ಯಾಯ ಸಿಗ್ಬೇಕು ಅಂದ್ರೆ ನೀವು ಸಹಕರಿಸ್ಬೇಕು. ಏನೂ...’

‘ಆಯ್ತು ಸಾರ್ ನನಗೆ ಗೊತ್ತಿರಷ್ಟೂ ಯೇಳ್ತೀನಿ.’

‘ಇನ್ನೊಂದು, ನಾವು ನಿಮ್ಮನ್ನ ವಿಚಾರಣೆ, ಪ್ರಶ್ನೆ ಅಂತ ಏನು ಮಾಡ್ತಾಯಿಲ್ಲ. ಬರೀ ನಿಮ್ಮ ಹೇಳಿಕೆ ತಗೊಳ್ತಾ ಇದ್ದೀವಿ ಅಷ್ಟೇ. ನಮಗೇನು ತಿಳಿಬೇಕೊ ಅದನ್ನು ಕೇಳ್ತೀವಿ, ನೀವು ಹೇಳಿದ್ದು ನಾವು ಮರಿಬಾರ್ದು ಅನ್ನೋದಕ್ಕೆ ಬರ್ಕೊಂತೀವಿ ಅಷ್ಟೇ. ಗಾಬರಿಯೇನು ಬೇಡ.’

ಅರ್ಥವಾಯಿತೆನ್ನುವಂತೆ ತಲೆಯಾಡಿಸಿದಳು. ಕಮಲಾಳನ್ನು ಪೂರ್ತಿಯಾಗಿ ವಿಶ್ವಾಸಕ್ಕೆ ತೆಗೆದುಕೊಂಡಿದ್ದ ಮಾಯಣ್ಣ. ಅಲ್ಲೇ ಹೊರಗಡೆ ಇದ್ದ ಸ್ಟೇಷನ್ನಿನ ರೈಟರ್ ಕುಮಾರ್‌ನ ನಡುಮನೆಗೆ ಕರೆಸಿ, ಮಾಯಣ್ಣ ಮಾತು ಶುರು ಮಾಡ್ಕೊಂಡ.

‘ಯಾವಾಗಿಂದ ಅಮ್ಮು ಮನೇಲಿ ಕೆಲಸ ಮಾಡ್ತಿದ್ದೀರ?’

‘ಪೋದ್ನೆ ಸಂಕ್ರಾಂತಿಯಿಂದ.’

‘ಯಾರ್ಯಾರ್ ಬರ್ತಾರೆ ಅವರ ಮನೆಗೆ.’

‘ಅಕ್ಕಾವ್ರ ಹಳೇ ಫ್ರೆಂಡ್ ಸಿತಾರಕ್ಕ, ಅವರ ಚಿಕ್ಕಮ್ಮೋರ ತಮ್ಮ ರವಿ, ಜಯಂತಣ್ಣ, ಡೈರೆಕ್ಟರ್ ಸಾರು, ಆಮೇಲೆ ಯಾವಗಾನ ಒಂದೊಂದ್ಸಾರಿ